ಬಿಗಿಯಾಗಿ ಹಿಡಿದುಕೊಳ್ಳೋಕೆ ಆ ನಟ್‌ಗಳನ್ನ ಹಾಕಿರೋದು ಅಂತಾ?'

'ಗೊತ್ತು ಸ್ವಾಮಿ... ನಮ್ಗೂ ಗೊತ್ತು. ನಾವೇನೆಲ್ಲಾ ನಟ್‌ಗಳನ್ನ ತೆಗೆದುಬಿಡಲ್ಲ... ಕೆಲವನ್ನ ಅಲ್ಲೇ ಬಿಡ್ತೀವಿ. ನಮ್ಗೇನು ಬುದ್ದಿ ಇಲ್ವಾ... ನಮ್ಗೂ ತಿಳಿವಳಿಕೆಯಿದೆ...' ಡೆನಿಸ್ ಆಕಳಿಸಿ ಬಾಯಿಮುಂದೆ ಚಿಟಕೆ ಹೊಡೆದುಕೊಂಡ.

'ನೀನು ಈಗ ಎಲ್ಲಿ ನಟ್ ತೆಗೆದಿದ್ಯೋ ಅಲ್ಲೇ ಹೋದ ವರ್ಷ ರೈಲು ಬಿದ್ದಿದ್ದು' ನ್ಯಾಯಾಧೀಶರು ಹೇಳಿದರು, 'ನನಗೆ ಈಗ ಅರ್ಥ ಆಗ್ತಿದೆ ಅದು ಹೇಗೆ ಆಯ್ತು ಅಂತ'.

'ಏನು... ಏನು ಸ್ವಾಮಿ ನೀವು ಹೇಳ್ತಿರೋದು?'

'ನಾನು ಹೇಳಿದ್ದು, ಹೋದ ವರ್ಷ ಅಲ್ಯಾಕೆ ರೈಲು ಬಿತ್ತು ಅಂತ ಈಗ ಗೊತ್ತಾಯ್ತು ಅಂತ... ಗೊತ್ತಾಯ್ತಾ?'

'ಅದೇ ಮತ್ತೆ... ನೀವು ಓದ್ಕೊಂಡಿದ್ದೀರಿ. ನಿಮ್ಗೆ ಏನು ಎತ್ತ ಗೊತ್ತಾಗುತ್ತೆ. ಒಳ್ಳೇ ಜನ. ಆ ದೇವ್ರಿಗೆ ಗೊತ್ತು ಯಾರಿಗ್ ಎಂಥಾ ಬುದ್ಧಿ, ಎಷ್ಟು ಬುದ್ಧಿ ಕೊಡ್ಬೇಕೂಂತ... ಅದೇ ಹೇಳಿದ್ನಲ್ಲಾ ನಿಮಗ್ಗೊತ್ತಾಗೋ ಹಾಗೆ ಇವನ್ಗೆ, ಈ ಕಾವಲ್ಗಾರ ಇವಾನ್‌ಗೆ ಗೊತ್ತಾಗ್ಬೇಕಲ್ಲ... ಅವ್ನೂ ನಮ್ತರಾನೇ ಹೆಬ್ಬೆಟ್ಟಿನ ಹಳ್ಳೀ ಮುಕ್ಕ. ಏನೂ ಬುದ್ಧಿಗಿದ್ದಿ ಇಲ್ದೋನು. ಅಲ್ಲ, ಇವ್ನು ನಾನೇನೋ ಮಾಡಬಾರದ್ದು ಮಾಡ್ಬಿಟ್ಟೆ ಅಂತ ಕಂಡಾಪಟ್ಟೆ ಬೈದು, ಬಟ್ಟೆ ಹಿಡ್ದು ಎಳ್ದಾಡ್ಬಿಟ್... ನನ್ನ ಮುಟ್ಟಕ್ಕುಂಚೆ ಯೋಚ್ನೆ ಮಾಡ್ಬೇಕಿತ್ತು ತಾನೆ... ಒಳ್ಳೇ ಅಡ್ನಾಡಿ ಅವ್ನು... ಇದ್ನ ಬಕೋರ್ಳಿ ಸ್ವಾಮಿ... ಅವ್ನು ನನ್ನ ಎದೆ ಮೇಲೆ, ತಲೆ, ಮುಖದ ಮೇಲೆಲ್ಲಾ ಹೊಡ್ದಿದ್ದಾನೆ'.

'ನಿನ್ನ ಗುಡಿಸಲಲ್ಲಿ ಕೂಡಾ ಇವರಿಗೆ ಇನ್ನೊಂದು ನಟ್ ಸಿಕ್ಕಿದೆ... ಅದನ್ಯಾವಾಗ ಎಲ್ಲಿ ತೆಗೆದದ್ದು?'

'ಯಾವ್ದು? ಅದೇ ಕೆಂಪು ಡಬ್ಬದೊಳಗಿದ್ದುದ್ದಾ?'

'ಅದೆಲ್ಲಿತ್ತು ಅಂತ ನನಗ್ದೇಗೆ ಗೊತ್ತು. ಅದು ನಿನ್ನ ಗುಡಿಸ್ಲಲ್ಲಿ ಸಿಕ್ತು. ಅದನ್ಯಾವಾಗ ಎಲ್ಲಿ ತೆಗ್ದದ್ದು?'

'ಅದು ನಾನು ತೆಗ್ದದ್ದಲ್ಲಾ. ಅದೇ ಒಕ್ಕಣ್ಣ ಸೈಮನ್ ಇದಾನಲ್ಲ, ಅವನ ಮಗ ಇಗ್ನಾಶ್ಕಾ ಕೊಟ್ಟಿದ್ದು ನನಗೆ. ಅದೇ ಕೆಂಪು ಡಬ್ಬದೊಳಗಿದ್ದುದು. ಕೊಟ್ಟಿಗೇಲಿರೋ ಹಲಗೆ ಮೇಲಿದ್ದುದ್ದನ್ನ ನಾನು ಮಿಟ್ರಾಫೋನ್ ಒಟ್ಟಿಗೆ ಹೋಗಿ ತೆಗೆದದ್ದು'.

'ಯಾರದು ಮಿಟ್ರಾಫೋನ್?'

'ಮಿಟ್ರಾಫೋನ್ ಪೆಟ್ರೋವ್... ಅವ್ನು ಗೊತ್ತಿಲ್ವಾ ನಿಮ್ಗೆ? ಅವ್ನು ಮೀನಿಡಿಯೋ ಬಲೆ ಮಾಡಿ ಸಾವ್ಕಾರರಿಗೆಲ್ಲಾ ಮಾರ್ತಾನೆ. ಅವ್ನಿಗೆ ತುಂಬಾ ತುಂಬಾ ನಟ್‌ಗಳು ಬೇಕಾಗುತ್ತೆ. ಆಜುಬಾಜು ಒಂದು ಬಲೆ ಮಾಡಕ್ಕೆ ಹತ್ತೋ ಹನ್ನೆರಡೋ ನಟ್‌ಗಳು ಬೇಕಾಗುತ್ತೆ'.

'ಆಯ್ತಾಯ್ತು! ಅವನನ್ನೂ ಕರೆಸೋಣ. ಈಗ ಇಲ್ಲಿ ಕೇಳು. ನಮ್ಮ ದೇಶದ ದಂಡಸಂಹಿತೆ ವಿಧಿ 1081ರ ಪ್ರಕಾರ ರೈಲ್ವೆ ಹಳಿಗಳ ಮೇಲೆ ಆಗುವ ಪ್ರತೀ ಹಾನಿ ರೈಲ್ವೆ ಸಂಚಾರವನ್ನ ಅಪಾಯಕ್ಕೆ ಸಿಲುಕಿಸಲು ಮಾಡುವ ಉದ್ದೇಶಪೂರ್ವಕ ಕೃತ್ಯ ಮತ್ತು ಹಾಗೆ ರೈಲು ಅಪಘಾತವಾಗುತ್ತದೆ ಎಂದು ತಿಳಿದೂ ತಿಳಿದೂ ಮಾಡುವ ಅಪರಾಧ ಕೃತ್ಯಕ್ಕೆ... (ನಿನಗಿದು ಅರ್ಥ ಆಗ್ತಿದ್ಯೇನಯ್ಯಾ? ರೈಲು ಹಳಿಯಿಂದ ನಟ್‌ಗಳನ್ನ ತೆಗೆಯೋದ್ರಿಂದ ಏನಾಗ್ಬೋದು, ಏನಾಗ್ತಿದೆ ಅಂತ ಗೊತ್ತಿದ್ದೂ ತೆಗೆದಿದ್ದರಿಂದ...) ದಂಡ ಮತ್ತು ಶಿಕ್ಷೆಯನ್ನು ವಿಧಿಸಲಾಗುತ್ತದೆ'.

'ಅದ್ನಿಜ ಬಿಡಿ. ನಿಮ್ಗದೆಲ್ಲಾ ಚೆನ್ನಾಗಿ ಗೊತ್ತು... ನಾವೋ ಹಳ್ಳೀ ಮುಕ್ಕರು... ಓದುಬರ ಎಲ್ಬಂತು... ನಮ್ಗೇನು ತಿಳೀತೈತೆ?'

'ಇದೆಲ್ಲಾ ಅರ್ಥ ಆಯಿತಾ! ಸುಮ್ನೆ ಸುಳ್ಳುಪಳ್ಳೇ ನಾಟ್ಕ ಮಾಡ್ಕೊಂಡು... ನಾಚಿಗ್ಗೇಡು!'

'ನಾನು ಸುಳ್ಳಪಳ್ಳು... ನಾನ್ಯಾಕುಸ್ಳು ಏಳ್ಬೇಕು! ನಿಮಗ್ ನಂಬಿಕೆ ಇಲ್ದಿದ್ರೆ ನಮ್ಮಳ್ಳೀಗ್ಬಂದು ಯಾರನ್ಬೇಕಾದ್ರೂ ಕೇಳಿ. ತೂಕ ಹಾಕ್ದೆ ಗಾಳ ಬಿಟ್ರೆ ಆಳುಪಾಳು ಬ್ಲೀಕ್ ಮೀನ್ಸಿಕ್ಕೋದಷ್ಟೆ. ಮತ್ತೆ

